
ಪ್ರಶ್ನೆ : ಈ ವಾಕ್ಯದ ಆಧಾರದ ಮೇಲೆ, ನಾವೇನು ಮಾಡಬೇಕು ? ಮತ್ತು ಏನಾಗುತ್ತದೆ ?
"ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು ಯೋಹಾನ 1:12
"ಕರ್ತನ ನಾಮವನ್ನು ಹೇಳಿಕೊಳ್ಳುವವರಿಗೆಲ್ಲ ರಕ್ಷಣೆಯಾಗುವೆಂದು ಬರೆದದೆ - ರೋಮಾಪುರದವರಿಗೆ 10:13
"ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಜೀವವಿಲ್ಲ ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯ ಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ - 1 ಯೋಹಾನ =5 11:12




ಯೇಸುಕ್ರಿಸ್ತನು ಹೇಳಿದ್ದೇನೆಂದರೆ,
'ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯ ಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವುದಿಲ್ಲ ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ. ಯೋಹಾನ : 5:24

ನಿನ್ನ ಆಯ್ಕೆ : ಯೇಸು ಕ್ರಿಸ್ತನನ್ನು ನಿನ್ನ ರಕ್ಷಕನೆಂದು ಸ್ವೀಕರಿಸಿ, ನಿತ್ಯ ಜೀವವನ್ನು ಪಡೆಯಲು ಈ ರೀತಿಯಾಗಿ ನಿನ್ನನ್ನು ಒಪ್ಪಿಸಿಕೋ

- ಸರ್ವಶಕ್ತನಾದ ದೇವರೇ, ನಾನು ನನ್ನ ಆಲೋಚನೆ ಮೂಲಕ, ಮಾತಿನ ಮೂಲಕ, ಕಾರ್ಯದ ಮೂಲಕ ನಿನಗೆ ವಿರುದ್ಧವಾಗಿ ಮಾಡಿದ್ದರೆ, ನನ್ನನ್ನು ಕ್ಷಮಿಸು.
- ನಾನು **ಯೇಸುಕ್ರಿಸ್ತನನ್ನು** ನನ್ನ ಸ್ವಂತ **ರಕ್ಷಕನೆಂದು** ಸ್ವೀಕರಿಸುತ್ತೇನೆ ನನ್ನನ್ನು ನನ್ನ ಪಾಪಗಳಿಂದ ನರಕಾಗ್ನಿಯಿಂದ ತಪ್ಪಿಸಿ ಪರಲೋಕಕ್ಕೆ ಹೋಗುವಂತೆ ಮಾಡು ನನಗೆ **ನಿತ್ಯ ಜೀವವನ್ನು** ದಯಪಾಲಿಸು.
- ನನ್ನ ಹೃದಯ ಬಾಗಿಲನ್ನು ತೆಗೆದು ನಿಮ್ಮನ್ನು ನನ್ನ ರಕ್ಷಕನಾಗಿ ವಿಮೋಚಕನಾಗಿ ಸ್ನೇಹಿತನಾಗಿ ಆಹ್ವಾನಿಸುತ್ತೇನೆ ನಾನು ನಿಮ್ಮ ಮಾರ್ಗದಲ್ಲಿ ನಡೆಯುವಂತೆ ಸಹಾಯ ಮಾಡು. ಯೇಸುವಿನ ಹೆಸರಿನಲ್ಲಿ ಬೇಡಿಹೊಂದಿದ್ದೇನೆ. 'ಆಮೆನ್'

ಸಹಿ...................................................................ದಿನಾಂಕ...................................................

**ಯೇಸು ಹೇಳಿದ್ದೇನೆಂದರೆ, " ನಾನು ನಿನಗೆ ನಿತ್ಯ ಜೀವವನ್ನು ದಯಪಾಲಿಸುವೆನು. ಯೋಹಾನ 10:28**

ಪ್ರಶ್ನೆಗಳು : 1) ನೀನು ಹೃದಯ ಪೂರ್ವಕವಾಗಿ ನಿನ್ನ ಪಾಪಗಳಿಂದ ರಕ್ಷಿಸಲು ಯೇಸುಕ್ರಿಸ್ತನನ್ನು ಪ್ರಾರ್ಥಿಸಿರುವೆಯಾ ?
ರೋಮಾ 10:13ರ ಪ್ರಕಾರ ದೇವರು ನೀನೇನಾಗಿರುವೆ ಎಂದು ಕೇಳುತ್ತಾನೆ.
ಯಾವುದರಿಂದ ನೀನು ರಕ್ಷಿಸಲ್ಪಟ್ಟಿರುವೆ ?
ನೀನು ಈಗ ಮರಣ ಹೊಂದಿದರೆ ಎಲ್ಲಿ ಹೋಗುವೆ ಏಕೆ ?
ನೀನು ಈಗ ರಕ್ಷಿಸಲ್ಪಟ್ಟರುವೆ ? ಆ ರಕ್ಷಣೆಯನ್ನು ಕಳೆದುಕೊಳ್ಳುವ ಅವಕಾಶವಿದೆಯೇ ?

ಯೊಹೋವ 10:28 ನೋಡಿ "ಎಂದೆಂದಿಗೂ ನಾಶವಾಗುವುದಿಲ್ಲ ಇದರ ಅರ್ಥವೇನು ?
"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೀದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ". ರೋಮಾಪುರದವರಿಗೆ 10:9


2) ಯಾವ ರೀತಿಯಾಗಿ ದೇವರನ್ನು ನೀನು ತಿಳಿದುಕೊಳ್ಳಬಹುದು ?
ಅನುದಿನವೂ ಸತ್ಯವೇದವನ್ನು ಅಧ್ಯಯನ ಮಾಡು (1 ಪೇತ್ರ 2:2) ದೇವರಿಗೆ ಪ್ರಾರ್ಥಿಸು ಸತ್ಯವೇದವನ್ನು ಬೋಧಿಸುವ ಆಲಯಕ್ಕೆ ಹೋಗು (ಇಬ್ರಿಯರಿಗೆ 10:24:25) ಕ್ರಿಸ್ತನು ಯಾವ ರೀತಿ ನಿನ್ನನ್ನು ರಕ್ಷಿಸಿದ್ದಾನೆಂದು ಇತರರಿಗೆ ಹೇಳು, ದೀಕ್ಷಾಸ್ನಾನವನ್ನು ಹೊಂದು (ಅಪೊಸ್ತಲರು 10:47:48) ನೀನು ರಕ್ಷಿಸಲ್ಪಟ್ಟಿರುವೆ ಎಂದು ಇತರರಿಗೆ ಹೇಳು (ರೋಮ 10:9) ಕ್ರಿಸ್ತನಿಗೆ ವಿಧೇಯನಾಗಿ / ವಿಧೇಯಳಾಗಿ ಬಾಳು)

ನೀನು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಲು ನಿರ್ಧರಿಸಿದ್ದರೆ, ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ನಾವು ನಿಮಗೆ ಯೇಸುಕ್ರಿಸ್ತನ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತೇವೆ.

**ಗುಡ್‌ನ್ಯೂಸ್ ಬೈಬಲ್ ಕಾಲೇಜ** , ಪೋಸ್ಟ್ ಬಾಕ್ಸ್ ನಂ. 1684, ಸಿಕಂದರಾಬಾದ-580 0003. (ಆಂಧ್ರ ಪ್ರದೇಶ)
**GOODNEWS BIBLE COLLEGE**, P.O. Box No. 1684, Secundrabad - 5800 003. (A.P.)

# ನಿಲ್ಲಿರಿ !

## ಯೋಚಿಸು ? ನಿನ್ನ ಮರಣದ ನಂತರದ ದಿನಗಳನ್ನು ಎಲ್ಲಿ ಕಳೆಯುವೆ ?




**"ನಿತ್ಯ ಜೀವವು ದೇವರ ಬಹುಮಾನ !**

## ಅದನ್ನು ನೀನು ಸ್ವೀಕರಿಸಿರು -ವೆಯಾ ?


ಯೇಸುಕ್ರಿಸ್ತನು ಹೇಳಿದ್ದೆನೆಂದರೆ ಎಲೈ ಕಷ್ಟಪಡುವವರೇ ಹೊರಹೊತ್ತವರೆ **ನೀವೆಲ್ಲರೂ ನನ್ನ ಬಳಿಗೆ** ಬನ್ನಿರಿ ನಾನು ನಿಮಗೆ **ವಿಶ್ರಾಂತಿ ಕೊಡುವೆನು**" ಮತ್ತಾಯ 11:28
"ಯೆಹೋವನು **ಸಿಕ್ಕುವ** ಕಾಲದಲ್ಲಿ ಆತನನ್ನು ಆಶ್ರಯಿಸಿರಿ ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹ ಮಾಡಿರಿ ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ. **ಆತನು ಅವನನ್ನು ಕರುಣಿಸುವನು ;** ನಮ್ಮ ದೇವರನ್ನು ಆಶ್ರಯಿಸಲಿ ಆತನು ಮಹಾಕೃಪೆಯಿಂದ ಕ್ಷಮಿಸುವನು "ಯೆಶಾಯ 55:6.7

<u>ನಿತ್ಯ ಜೀವದ</u> ಬಗ್ಗೆ ನಾವು <u>ಹೇಗೆ</u> ತಿಳಿದುಕೊಳ್ಳಬಹುದು

ಮೊದಲು ಈ ಕೆಳಗಿನ ನಾಲ್ಕು ಅಂಶಗಳನ್ನು ತಿಳಿದುಕೊಳ್ಳಬೇಕು

## ಎಲ್ಲರೂ ಪಾಪಮಾಡಿದ್ದಾರೆ.


"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು
ಹೊಂದದೆ ಹೋಗಿದ್ದಾರೆ" ರೋಮಾ 3:23









ಸ್ವತಃ ನಾವು ಪಾಪದ ಕಡೆ ತಿರುಗಿಕೊಳ್ಳುತ್ತಿರುವುದು




ದೇವರಿಂದ ಬೇರ್ಪಟ್ಟಿರುವದು ಮತ್ತು ಬೇರೆಯಾಗಿದ್ದೇವೆ.




ದೇವರ ಪರಿಪೂರ್ಣತೆಯ ಮುಂದೆ ಎಲ್ಲರೂ ಪಾಪಮಾಡಿದ್ದರಾಗಿದ್ದಾರೆ




ಪಾಪವು ದೇವರಿಗೆ ಅವಿಧೇಯವಾದಂತಹ ಕೆಲಸ

- ದೇವರ ಪರಿಶುದ್ದತೆಗೆ ನಮ್ಮನ್ನು ಹೋಲಿಸಿದರೆ ನಾವು ಮಹಾಪಾಪಿಗಳಾಗಿದ್ದೇವೆ

ಪ್ರಶ್ನೆ : ಬೈಬಲ್ ಪ್ರತ್ಯಕ್ಷ ಮಾಡುವ ದೇವರನ್ನು ನೀನು ದೇವರನ್ನಾಗಿ ಸ್ವೀಕರಿಸಲು ಇಷ್ಟಪಡುವೆಯಾ ?

ಪ್ರಶ್ನೆ : ನಿನ್ನ ಪಾಪದ ಜೀವನವನ್ನು <u>ಬಿಟ್ಟು ದೇವರ</u> ಕಡೆಗೆ ಬರಲು ಇಷ್ಟಪಡುವೆಯಾ ? (ಪ್ರಾಯಶ್ಚಿತ)

## 2. ಪಾಪದ ಶಿಕ್ಷೆ ಮರಣ ?

"ಯಾಕೆಂದರೆ <u>ಪಾಪವು</u> ಕೊಡುವ ಸಂಬಳ **<u>ಮರಣ</u>** ; ದೇವರ ಉಚಿತಾರ್ಥ
ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ **<u>ನಿತ್ಯದೇವ</u>** ರೋಮಾ 6:23

"ಆ ಮೇಲೆ ಮೃತ್ಯುವು ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು ಆ ಬೆಂಕಿಯ
ಕೆರೆಯೇ ಎರಡನೆಯ ಮರಣವು ಪ್ರಕಟನೆ 20:14

ವಿವರಣೆ : ಯಾಕೆಂದರೆ ನಾವೆಲ್ಲರೂ ಪಾಪ ಮಾಡಿದ್ದೇವೆ ಕಾರಣ ನಾವು ಮರಣಕ್ಕೆ ಅಂದರೆ ಅಗ್ನಿ ಕೆರೆಗೆ ಹೋಗುತ್ತಿದ್ದೇವೆ ಎಂದು ದೇವರ ವಾಕ್ಯವು ನಮಗೆ ತಿಳಿಸುತ್ತದೆ ಇದು ನಮಗೆ ಒಂದು ದುರ್ವಾರ್ತೆ. ಅಗ್ನಿಕೆರಗೆ ಹೋಗುವುದು ನನಗೂ ಇಷ್ಟವಿಲ್ಲ ಹಾಗದರೆ ಇದರಿಂದ ಹೊರಗೆ ಬರಲು ಮಾರ್ಗವಿದೆಯೆ ? ಹೌದು ಇದೆ. ದೇವರು ನಮಗೆ ಉಚಿತವಾದ ಬಹುಮಾನವನ್ನು ಕೊಡಲು ಸಮ್ಮತಿಸುತ್ತಾನೆ ಅದೇನೆಂದರೆ ನಿತ್ಯಜೀವ ಆ ನಿತ್ಯಜೀವವು ನಮ್ಮ <u>ಒಳ್ಳೆಯ ಕಾರ್ಯಗಳಿಂದಾಗಿ</u> ಅಥವಾ ಯಾವ ಮತದವರಿಂದಾಗಲಿ ಸಿಗುವುದಿಲ್ಲ ಆ ನಿತ್ಯ ಜೀವವನ್ನು ಕೇವಲ ಯೇಸುಕ್ರಿಸ್ತನಿಂದ ಮಾತ್ರ ಹೊಂದುತ್ತೇವೆ.

ಮರಣವು



ಅಗ್ನಿಕೆರೆ



"**ನಂಬಿಕೆಯ** ಮೂಲಕ ಕೃಪೆಯಿಂದಲೇ **ರಕ್ಷಣೆ ಹೊಂದಿದವರಾಗಿದ್ದೀರಿ** ಆ ರಕ್ಷಣೆಯು ನಿಮ್ಮಿಂದುಂಟಾದುದ್ದಲ್ಲ ಅದು ದೇವರ ವರವೇ ಅದು **ಪುಣ್ಯಕ್ರಿಯೆಗಳಿಂದ** ಉಂಟಾದುದಲ್ಲ ಆದ್ದರಿಂದ ಹೋಗಳಿಕೊಳ್ಳುವುದುಕ್ಕೆ ಯಾರಿಗೂ ಆಸ್ಪದವಿಲ್ಲ ನಾವು ಹೊಸ ಜೀವತಕ್ಕೆ ತಿರುಗಿದರೆ ನಮ್ಮ ಗತವು ಮುಚ್ಚಲ್ಪಡುವುದಿಲ್ಲ . ಎಫೆಸಿ 2:8:9





ಬಹುಮಾನವು ಉಚಿತವಾದದ್ದು ಅದನ್ನು ತೆಗೆದುಕೊಳ್ಳಬಹುದು ಅಥವಾ ತಿರಸ್ಕರಿಸಬಹುದು. ನಿತ್ಯ ಜೀವವೆಂದರೆ ವ್ಯಕ್ತಿಗತವಾಗಿ ದೇವರನ್ನು ತಿಳಿದುಕೊಳ್ಳುವದು, ಮರಣದ ನಂತರ ಪರಲೋಕಕ್ಕೆ ಹೋಗುವುದು ಆದ್ದರಿಂದ ದೇವರ ವಾಕ್ಯವು ಹೇಳುತ್ತದೆ. ನಾವು ಅಗ್ನಿಕೆರೆಗೆ ಹೋಗುವುದಾಗಿ ಆದರೆ ದೇವರ ಪ್ರೀತಿಯು ನಾವು ಪರಲೋಕಕ್ಕೆ ಹೋಗಬೇಕೆಂದು ಹೇಳುತ್ತದೆ.

ದೇವರು ಯಾವ ರೀತಿ ಪಾಪ ಕ್ಷಮಾಪಣ ನಿತ್ಯಜೀವವನ್ನು ಅನುಗ್ರಹಿಸುವನೋ ಗಮನಿಸಿ.

## ಯೇಸುಕ್ರಿಸ್ತನು ನಮ್ಮ ಎಲ್ಲಾ ಶಿಕ್ಷೆಗಳನ್ನು ಆತನ ಮೇಲೆ ವಹಿಸಿಕೊಂಡನು

"ಆದರೆ ನಾವು ಪಾಪಿಗಳಾಗಿದ್ದಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ ರೋಮಾಪುರದವರಿಗೆ 5:8




ಯೇಸುಕ್ರಿಸ್ತನು ಸರ್ವರಿಗೂ ರಕ್ಷಕನಾಗಿದ್ದಾನೆ
ಆತನು ಈಗಲೂ ಸಹ ನಿನ್ನನ್ನೂ ರಕ್ಷಿಸಲು
ನಿನ್ನ ರಕ್ಷಕನಾಗಿರುವನು

ಸೂಚನೆ : ಯೇಸುಕ್ರಿಸ್ತನು ನಮ್ಮ ಭೂತ,
ವರ್ತಮಾನ, ಭವಿಷ್ಯತ ಕಾಲದ ಪಾಪಗಳನ್ನು
ತನ್ನ ಮೇಲೆ ವಹಿಸಿಕೊಂಡನು

"ಪ್ರತಿಯೊಬ್ಬನು ತನ್ನ ತನ್ನ ದಾರಿಯನ್ನು
ಹಿಡಿಯುತ್ತಿದ್ದನು ನಮ್ಮೆಲ್ಲರ ದೋಷಫಲವನ್ನು
ಯೆಹೋವನು ಅವನ ಮೇಲೆ ಹಾಕಿದನು
ಯೆಶಾಯ 53:6

ಕ್ರಿಸ್ತನು ಈಗ ಸರ್ವ ಜನರಿಗೂ ರಕ್ಷಕನಾಗಿದ್ದಾನೆ (ಪಾಪಗಳನ್ನು ಭರಿಸುವನು)
ಈಗ ಪರಲೋಕ ದ್ವಾರವು ಸರ್ವಜನರಿಗೂ ತೆರೆಯಲ್ಪಟ್ಟಿದೆ ?
ಆದರೆ ನಾವು ಹೇಗೆ ಅದರೊಳಗೆ ಪ್ರವೇಶಿಸಬಹುದು ?
ಹೇಗೇಂದರೆ,

4 a) **ಯೇಸುಕ್ರಿಸ್ತನು** ದೇವರ ಮಗನೆಂದು **ನಂಬಿರಿ**


- ಆತನು ನಮ್ಮ ಪಾಪಗಳಿಗೋಸ್ಕರಮರಣ ಹೊಂದಿದನು ಎಂದು ನಂಬಿರಿ
- **ಆತನು ಮೂರನೇ ದಿನ ಪುನರುತ್ಥಾನನಾದನೆಂದು ನಂಬಿರಿ**
- **ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿರಿ**

b) ಆಗ ಮಾತ್ರ ನೀವು ಪರಲೋಕಕ್ಕೆ ಹೋಗಲು ಸಾಧ್ಯ.

ಆಗ ಮಾತ್ರ ನಿಮಗೆ **ಪಾಪಕ್ಷಮಾಪಣೆ** ನಿತ್ಯ ಜೀವವು ದೊರಕುವದು ಈ **ನಿತ್ಯ ಜೀವವು** ನಿಮ್ಮ ಒಳ್ಳೇಯ ಕಾರ್ಯಗಳಿಂದಾಗಲಿ ಅಥವಾ ಯಾವ ಮತದವರಿಂದಾಗಲೀ ಸಿಗುವುದಿಲ್ಲ. ಆ ನಿತ್ಯ ಜೀವವು ಕೇವಲ ಯೇಸುಕ್ರಿಸ್ತನ ಮೂಲಕ ಸಿಗುವುದು.






ನೀನು <u>ಸಿದ್ಧವಾಗಿದ್ದೀಯಾ!</u> ದೇವರು ಕೊಟ್ಟಂತಹ <u>ವಾಗ್ದಾನಗಳನ್ನು</u> ಹೊಂದಿಕೊಳ್ಳುವುದಕ್ಕೆ.